ಬಿಟ್ಟುಕೊಂಡಿದ್ದೇ ತಪ್ಪು ಅಂತ ನನಗೂ ಮನವರಿಕೆಯಾಗಹತ್ತಿತ್ತು. ಆದರೇನು ಮಾಡುವುದು, ಯಾರೋ ಆಗಿದ್ದರೆ ಕೆಲಸದಿಂದ ಕಿತ್ತುಹಾಕಬಹುದಿತ್ತು. ಈಗ ಸಹಿಸಿಕೊಳ್ಳದೇ ಬೇರೆ ವಿಧಿಯಿದೆಯೇ?

★★★

ತನ್ನ ಹೆಸರನ್ನು ಮುಖಪುಟದಲ್ಲಿ ಕಂಡೊಡನೆ ದಾದಾ ಹಿರಿಹಿರಿ ಹಿಗ್ಗಿಹೋಗಿದ್ದ. ಪುಸ್ತಕವನ್ನು ತಿರುಗಿಸಿ ತಿರುಗಿಸಿ ನೋಡಿದ್ದೇನು, ಅದರ ಅಂದ ಚಂದ ಹೊಗಳಿದ್ದೇನು, ಕವರ್ ಪೇಜಿನಲ್ಲಿದ್ದ ತನ್ನ ಮುಖವನ್ನು ಮುಟ್ಟಿ ಮುಟ್ಟಿ ಹನಿಗಣ್ಣಾಗಿದ್ದೇನು. “ಸಾರ್, ನಮ್ಮಪ್ಪ ಇರಬೇಕಿತ್ತು ಸಾರ್ ಈ ಪುಸ್ತಕ ನೋಡೋಕೆ. ಯಾವುಯಾವುದೋ ಸ್ವಾತಂತ್ರ್ಯ ಹೋರಾಟಗಾರರ ಚರಿತ್ರೆಗಳನ್ನು ಕೊಟ್ಟು, ನೋಡು ಮುಂದೆ ನಿನ್ನ ಬಗ್ಗೆನೂ ಇಂಥ ಪುಸ್ತಕ ಬರಬೇಕು, ನೀನು ಅಷ್ಟು ಬೆಳೀಬೇಕು ಅಂತಿದ್ದರು. ಈಗ ನಾವು ಬೆಳೆದಿರೋದು ನೋಡೋಕೆ ಅವರಿಲ್ವಲ್ಲ ಅಂತ ಬೇಜಾರಾಗುತ್ತೆ. ಏನು ಮಾಡೋದು” ಅಂತ ಅತ್ತೇ ಬಿಡುವಂತೆ ಹೇಳಿದ. ಭೂಗತ ದೊರೆಗಳ ಕಣ್ಣಲ್ಲೂ ನೀರು ಬರುತ್ತದಲ್ಲ ಅಂತ ನನಗೆ ಆಶ್ಚರ್ಯವಾಯಿತು. ಹಿಂದೆ ನಿಂತ ಅವನ ಚೇಲಾಗಳ ಅಕ್ಷಿಗಳೂ ಕೆಂಪಗಾಗಿದ್ದವು.

ಅದೇ ಲಹರಿ–ನಂಬಿಕೆಗಳಲ್ಲಿ ಅಂದು ದಾದಾ ನನಗೊಂದು ಅಭಯವಿತ್ತ. “ಸಾರ್, ಯಾರೇ ಆಗಲಿ, ಅವನು ಜಗತ್ತಿನ ಯಾವ ಮೂಲೆಯಲ್ಲೇ ಇರಲಿ, ಹೀಗ್ಹೀಗೆ ಅವನನ್ನ ಎತ್ತಬೇಕು ಅಂತ ನಿಮ್ಮ ಮನಸಲ್ಲಿದ್ದರೆ ನಮಗೆ ಹೇಳಿ ಸಾರ್. ಯಾರಿಗೂ ಏನೂ ಡೌಟೇ ಬರಬಾರದು. ಹಂಗೆ, ಹಂಗೆ ಕೆಲಸ ಮುಗಿಯುವಂಗೆ ಮಾಡಿಕೊಡ್ತೀವಿ” ಅಂತ ಕೈಹಿಡಿದು ಹೇಳಿದ.

ನನಗೆ ಭಯವಾಗಿ ಕೈ ಬಿಡಿಸಿಕೊಂಡೆ.

“ಏನು ಹೇಳ್ತಿದೀರಿ ದಾದಾ ನೀವು? ನನಗ್ಯಾಕೆ ಅಂಥ ಅವಶ್ಯಕತೆ ಬರಬೇಕು? ಸುಮ್ಮನೇ ಏನೇನೆಲ್ಲ ಹೇಳ್ಬೇಡಿ ನೀವು” ಅಂತ ಗಡುಸಾಗೇ ಅಂದೆ.

“ಅಲ್ಲ ಸಾರ್, ಯಾರೇ ಆಗಲಿ, ಹೇಳಿದೆನಲ್ಲ. ಅದು ಬಹಳ ಕಷ್ಟ ಅಂತ ತಿಳ್ಕೊಂಡಿರ್ತಾರೆ. ಆದರೆ, ಇಷ್ಟು ವರ್ಷದ ನಮ್ಮ ಅನುಭವದಲ್ಲಿ ನೋಡಿದೀವಲ್ಲಾ, ಯಾರದಾದರೂ ಕೈಯನ್ನೋ ಕಾಲನ್ನೋ ತೆಗೆಯೋದೇ ಹೆಚ್ಚು ಡಿಫಿಕಲ್ಟು. ಎತ್ತಿ ಬಿಡೋದೇ ನಿಜಕ್ಕೂ ಸುಲಭ. ಏನೂ ಅನುಮಾನಾನೇ ಬರಬಾರ್ದು. ಅವರೇ ಹೋಗಿ ಹೋಗಿ ಹೊಳೆಗೆ ಹಾರಿಕೊಂಡಂಗೆ ಇರ್ಬೇಕು. ಅದು ಹೇಗೆ ಏನು ಅಂತ ನಿಮಗೆ, ಹೇಳಿದವರಿಗೂ ಗೊತ್ತಾಗಲ್ಲ. ಹಂಗೆ ಕೆಲಸ ಮುಗಿಸಿ ಕೊಡ್ತೀವಿ ಸಾರ್...”

ಇವನ ಸನ್ನಿಧಿಯಲ್ಲಿ ಹೀಗೆ ಅಕಾರಣ ದೈನ್ಯತೆಯೊಂದು ತಾನೇ ತಾನಾಗಿ ಮೈದುಂಬಿ ಬಿಡುವುದು ಕಂಡು ನನ್ನ ಮೇಲೇ ನನಗೆ ಅಸಹನೆ ಉಕ್ಕಿ ಬಂತು. ಆದರೂ ಈ ಕ್ಷಣ ಇಲ್ಲಿಂದ ಎದ್ದು ಹೋಗು ಅಂತ ಹೇಳಲು ಅಳುಕಾಯಿತು.

ದಾದಾ ಕುಳಿತಲ್ಲೇ ತುಸು ಬಗ್ಗಿ ಮುಂದೆ ಬಂದ. ಅವನ ಕುಳ್ಳ ಆಕೃತಿಗೆ ಈ ದೊಡ್ಡ ಕಣ್ಣುಗಳು ಹೊಂದುವುದಿಲ್ಲವಲ್ಲ ಎಂಬುದು ನನ್ನ ಮನಸ್ಸಿನಲ್ಲಿ ಹಾಯ್ದು ಹೋಯಿತು. ತನ್ನ ದೇಹಕ್ಕಿಂತ ತಗ್ಗಿದ ದನಿಯಲ್ಲಿ ಹೇಳಿದ. “ಸಾರ್, ನಿಮ್ಮ ಹತ್ತಿರದವರೇ ತುಂಬಾ ಕಿರಿಕಿರಿ ಮಾಡ್ತಿದಾರೆ ಅಂತ ನಮಗೆ ಸುದ್ದಿ ಬಂದಿದೆ. ಅಂಥವರಿಂದ ನಮಗೂ ಡೇಂಜರ‍್ರು. ಅದಕ್ಕೇ ಹೇಳ್ತಿರೋದು ಸಾರ್. ಏನೂ ಇಲ್ಲ, ದಿನದ ಯಾವುದೇ ಸಮಯವಾಗಲಿ. ನಮ್ಮ ಪರ್ಸನಲ್ ಫೋನಿಗೆ ಕರೆಮಾಡಿ ಗೋ ಅಹೆಡ್ ಅಂತೊಂದು ಒಪ್ಪಿಗೆ ಕೊಟ್ಟುಬಿಡಿ ಸಾರ್. ಮುಂದಿನದ್ದೆಲ್ಲ ನಾವು ನೋಡ್ಕೋತೀವಿ. ನೀವದರ ಪರೇಶಾನ್ ಬಿಟ್ಟುಬಿಡಿ” ಅಂದ. ಮುಂದಿನ ಎರಡು ನಿಮಿಷ ಅವನೇ ಎದ್ದು ಹೋಗುವ ತನಕ ಗಾಳಿಯಲ್ಲಿ ಕಣ್ಣು ನೆಟ್ಟು ನಾನು ಕುಳಿತೇ ಇದ್ದೆ. ಸುನೇತ್ರಾ ಹೇಳುತ್ತಿದ್ದಂತೆ ಇವನನ್ನು ಹತ್ತಿರ ಬಿಟ್ಟುಕೊಳ್ಳಬಾರದಿತ್ತು ಅಂತ ಪ್ರಥಮ ಬಾರಿ ಯಾಕೋ ಗಾಢವಾಗಿ ಅನ್ನಿಸಿಹೋಯಿತು.

ಆದರೂ ದಾದಾನ ಪುಸ್ತಕ ಪ್ರಕಟಿಸಿದಾಗಿನಿಂದ ಬೇಡಬೇಡವೆಂದರೂ ವಿಚಿತ್ರ ಗರ್ವವೊಂದು ನನ್ನ